ಮಂಗಳೂರು ವಿಶ್ವವಿದ್ಯಾನಿಲಯ
MANGALORE UNIVERSITY

ಕ್ರಮಾಂಕ/No:ಮಂವಿ/ಕಾಅಮ/ಎಎಫ್ಎಫ್/ಇ-45227/2022-23/ಎ1

ಕುಲಸಚಿವರಕಚೇರಿ
ಮಂಗಳಗಂಗೋತ್ರಿ– 574 199
Office of the Registrar
Mangalagangothri – 574 199

ದಿನಾಂಕ/Date: 20.05.2024

VIJAYA COLLEGE, MULKI
Inward No.: 91
Date: 24.5.24
Ref File:

**ಅಧಿಸೂಚನೆ**

ಮಂಗಳೂರು ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 (2000 ದ ಕರ್ನಾಟಕ ಅಧಿನಿಯಮ ಸಂ.29) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅಧಿನಿಯಮ ಸಂ.59(17) ನೇ ಪ್ರಕರಣದ ಪ್ರಕಾರ ವಿಶ್ವವಿದ್ಯಾನಿಲಯದ ಸಿಂಡಿಕೇಟು, ಸ್ಥಳೀಯ ವಿಚಾರಣಾ ಸಮಿತಿ ಮತ್ತು ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸುಗಳ ಮೇರೆಗೆ ಮತ್ತು ಈ ವಿಶ್ವ ವಿದ್ಯಾನಿಲಯವು ಗೊತ್ತುಪಡಿಸುವ ಷರತ್ತುಗಳಿಗೆ ಒಳಪಟ್ಟು ಕೆಳಕಂಡ ವ್ಯಾಸಂಗ ಕ್ರಮಗಳನ್ನು ಮತ್ತು ವಿಷಯಗಳನ್ನು ಕೆಳಕಂಡ ಕಾಲಾವಧಿಯವರೆಗೆ ಬೋಧಿಸುವುದಕ್ಕಾಗಿ **ವಿಜಯಾ ಕಾಲೇಜು, ಮುಲ್ಕಿ** ಎಂಬ ವಿದ್ಯಾಸಂಸ್ಥೆಗೆ **ಮುಂದುವರಿಕೆ** ಸಂಯೋಜನೆಯನ್ನು ನೀಡಲಾಗಿದೆ.

| ಕಾರ್ಯಕ್ರಮಗಳು | ಐಚ್ಛಿಕವಿಷಯಗಳು | ಪರಿಮಿತಿ | ಅವಧಿ |
|---|---|---|---|
| ಬಿ.ಸಿ.ಎ. | ನಿಯಮಾನುಸಾರ ಕಡ್ಡಾಯ ವಿಷಯಗಳು | 60 | ಶೈಕ್ಷಣಿಕ ವರ್ಷ 2023-24 ನೇ ಸಾಲಿಗೆ ಮುಂದುವರಿಕೆ ಸಂಯೋಜನೆ |

ಷರತ್ತು;

- ಈ ಸಂಯೋಜನೆಯು ಕಾರ್ಯಕ್ರಮಗಳ ಪರೀಕ್ಷೆಗಳನ್ನು ನಡೆಸಲು ಅರ್ಹ ಪರೀಕ್ಷಕರನ್ನು ಒದಗಿಸುವುದು ಕಾಲೇಜಿನ ಪ್ರಾಂಶುಪಾಲರ ಜವಾಬ್ದಾರಿ ಎಂಬ ಷರತ್ತಿಗೊಳಪಟ್ಟಿರುತ್ತದೆ.

ಕುಲಸಚಿವರು
20/5

ರಿಗೆ,
ಪ್ರಾಂಶುಪಾಲರು
ವಿಜಯಾ ಕಾಲೇಜು
ಮುಲ್ಕಿ, ಮಂಗಳೂರು- 574154

ಪ್ರತಿ:
1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣಇಲಾಖೆ(ಉನ್ನತಶಿಕ್ಷಣ), ಬಹುಮಹಡಿಗಳಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು – 560 001
2. ಕುಲಸಚಿವರು (ಪರೀಕ್ಷಾಂಗ), ಮಂಗಳೂರುವಿಶ್ವವಿದ್ಯಾನಿಲಯ, ಮಂಗಳೂರು
3. ಅಧೀಕ್ಷಕರು, ಶೈಕ್ಷಣಿಕ/ಸಿಂಡಿಕೇಟು/ಅಭಿವೃದ್ಧಿವಿಭಾಗಗಳು, ಮಂಗಳೂರುವಿಶ್ವವಿದ್ಯಾನಿಲಯ
4. ಎ6/ಎ7ವಿಷಯ ನಿರ್ವಾಹಕರು, ಶೈಕ್ಷಣಿಕವಿಭಾಗ, ಕುಲಸಚಿವರಕಚೇರಿ, ಮಂಗಳೂರುವಿಶ್ವವಿದ್ಯಾನಿಲಯ
5. ನಿರ್ದೇಶಕರು, DUIMS, ಮಂಗಳೂರು ವಿಶ್ವವಿದ್ಯಾನಿಲಯ, ಸದರಿ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯದ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.

24/5/24

ಕರ್ನಾಟಕ ಸರ್ಕಾರ

ಕ್ರಮಾಂಕ: ಇಡಿ 23 ಯುಡಿವಿ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 12/8/2013

VIJAYA COLLEGE, MULKI
Inward No. : 465
Date : 24.8.13
Ref File : ಶಾಶ್ವತ ಸಂಯೋಜನೆ

ಇಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬೆಂಗಳೂರು – 560 001.

ಇವರಿಗೆ
ಕುಲಸಚಿವರು,
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳೂರು.

ಮಾನ್ಯರೆ,

ವಿಷಯ:– 2011–12ನೇ ಶೈಕ್ಷಣಿಕ ಸಾಲಿನಿಂದ ವಿಜಯ ಕಾಲೇಜ್, ಮುಲ್ಕಿ, ಇದಕ್ಕೆ ಶಾಶ್ವತ ಸಂಯೋಜನೆ ನವೀಕರಿಸುವ ಬಗ್ಗೆ.

ಉಲ್ಲೇಖ:– ತಮ್ಮ ಪತ್ರ ಸಂಖ್ಯೆ: ಎಂಯು/ಎಸಿಸಿ/ಎಎಫ್ಎಫ್/160/2011–12/ಎ1 ದಿನಾಂಕ: 23/11/2011.

2011–12ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ವಿಜಯ ಕಾಲೇಜ್, ಮುಲ್ಕಿ, ಇಲ್ಲಿ ಅಸ್ತಿತ್ವದಲ್ಲಿರುವ ಬಿ.ಎ., ಬಿ.ಕಾಂ, ಮತ್ತು ಬಿ.ಎಸ್ಸಿ ಕೋರ್ಸುಗಳಿಗೆ ನೀಡಿರುವ ಶಾಶ್ವತ ಸಂಯೋಜನೆಯನ್ನು ಮುಂದುವರೆಸುವ ವಿಚಾರವನ್ನು ಮಂಗಳೂರು ವಿಶ್ವವಿದ್ಯಾಲಯದ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಆಧರಿಸಿ ಶೈಕ್ಷಣಿಕ ಪರಿಷತ್ತು ಮತ್ತು ಸಿಂಡಿಕೇಟುಗಳು ಮಾಡಿರುವ ಶಿಫಾರಸ್ಸಿನ ಬೆಳಕಿನಲ್ಲಿ ಸಂವೀಕ್ಷಿಸಲಾಗಿದೆ.

2) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 62(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಿಜಯ ಕಾಲೇಜ್, ಮುಲ್ಕಿ, ಇಲ್ಲಿ ಅಸ್ತಿತ್ವದಲ್ಲಿರುವ ಈ ಕೆಳಕಂಡ ಕೋರ್ಸಿಗೆ 2011–12ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಶಾಶ್ವತ ಸಂಯೋಜನೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮುಂದುವರೆಸುವಂತೆ ಸರ್ಕಾರದ ಶಿಫಾರಸ್ಸನ್ನು ತಿಳಿಸಲು ನಿರ್ದೇಶಿತನಾಗಿದ್ದೇನೆ.

| ಕ್ರಮ ಸಂಖ್ಯೆ | ಕೋರ್ಸು | ವಿಷಯ | | ವಿದ್ಯಾರ್ಥಿ ಪ್ರಮಾಣ |
|---|---|---|---|---|
| 1 | ಬಿ.ಎ. ಡಿಗ್ರಿ | ಇಂಗ್ಲೀಷ್, ಕನ್ನಡ ಹಿಂದಿ, ಸಂಸ್ಕೃತ ಮತ್ತು ಫ್ರೆಂಚ್ | ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಮಾಜಶಾಸ್ತ್ರ, ಇಂಗ್ಲೀಷ್. | 100 |
| 2. | ಬಿ.ಕಾಂ ಡಿಗ್ರಿ | –ಅದೇ– | ನಿಯಮಾನುಸಾರ ಕಡ್ಡಾಯ ವಿಷಯಗಳು | 90 |
| 3. | ಬಿ.ಎಸ್ಸಿ ಡಿಗ್ರಿ | –ಅದೇ– | ಸಂಖ್ಯಾಶಾಸ್ತ್ರ, ಭೌತಶಾಸ್ತ್ರ, ಗಣಿತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಗಣಕ ವಿಜ್ಞಾನ, ಇಲೆಕ್ಟ್ರಾನಿಕ್ಸ್ | 90 |

ಷರತ್ತುಗಳು:-

1) ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಕಾಲೇಜಿನ ಮೇಲ್ಕಂಡ ಕೋರ್ಸಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನರಹಿತ ಕೋರ್ಸ್ ಎಂದು ಪರಿಗಣಿಸತಕ್ಕದ್ದು;

2) ಮೇಲ್ಕಂಡ ಕಾಲೇಜು ವಿಶ್ವವಿದ್ಯಾಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು;

3) ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ;

4) ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು;

5) ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

6) ಕಾಲೇಜು/ಆಡಳಿತ ಮಂಡಳಿಯು ಶೇ.50 ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು; ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿಗದಿಪಡಿಸುವ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು. ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕ/ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ;

7) ದಿನಾಂಕ: 13-8-1997 ರಂದು ವಿಶಾಖ ವಿರುದ್ಧ ರಾಜಸ್ಥಾನ ಸರ್ಕಾರ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಅದು ಸಂಜ್ಞೇಯ ಅಪರಾಧ (ಅಂಂಟಿಟಿದಿಟಿಫಿಟಿಜ ಔಜಿಜಿಜಿಟಿಛಿಜ) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸತಕ್ಕದ್ದು; ಮುಂದುವರೆದು, ಕಾಲೇಜು/ಆಡಳಿತ ಮಂಡಳಿಯು ಸುಪ್ರೀಂ ಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ; ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು;

8) ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸನ್ನು ನಡೆಸತಕ್ಕದ್ದು; ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಲಿಯು ವಿದ್ಯಾರ್ಥಿ/ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು.

9) ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾಲಯವು ಅನುಮೋದಿಸುವವರೆಗೆ ಅಥವಾ 6 ತಿಂಗಳ ಅವಧಿಗೆ ಮೀರಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ;

10) ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ; ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.

11) ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.

12) ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ತಮ್ಮ ನಂಬುಗೆಯ,

(ಪ್ರಕಾಶ್ ರಾವ್ ಕೇಸರ್‌ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ).

ಪ್ರತಿ:-

1. ಕಾಲೇಜು ಶಿಕ್ಷಣ ಆಯುಕ್ತರು/ನಿರ್ದೇಶಕರು, ಬೆಂಗಳೂರು – 560 001.
2. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಂಗಳೂರು.
3. ಪ್ರಾಂಶುಪಾಲರು, ವಿಜಯ ಕಾಲೇಜ್, ಮುಲ್ಕಿ, ಮಂಗಳೂರು.